ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

20

ಇಲಾಖೆ / ವಿಷಯ : DEPARTMENT / SUBJECT: ಗೋಹತ್ಯೆ ನಿಷೇಧಕ್ಕೆ ಅಧ್ಯಾದೇಶ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE: 6/1/2021

# ಗೋಹತ್ಯೆ ನಿಷೇಧಕ್ಕೆ ಸುಗ್ರೀವಾಜ್ಞೆ ಜಾರಿ

## ರಾಜ್ಯ ಸರ್ಕಾರದ ಅಧ್ಯಾದೇಶಕ್ಕೆ ಗೌರ್ನರ್ ಸಹಿ
## ಕಾಂಗ್ರೆಸ್, ಜೆಡಿಎಸ್ ವಿರೋಧವಿದ್ದರೂ ಅಂಕಿತ


• **ಕನ್ನಡಪ್ರಭ ವಾರ್ತೆ** ಬೆಂಗಳೂರು 6/1/21

ರಾಜ್ಯದ ಕೃಷಿಕರಿಗೆ ಮಾರಕವಾಗುತ್ತದೆ ಎಂಬ ಕಾಂಗ್ರೆಸ್ ಹಾಗೂ ಜೆಡಿಎಸ್ ವಿರೋಧದ ನಡುವೆಯೂ 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧ್ಯಾದೇಶ-2020'ಕ್ಕೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

ವಿಧೇಯಕಕ್ಕೆ ವಿಧಾನಸಭೆ ಅಂಗೀಕಾರ ನೀಡಿದ್ದರೂ ಮೇಲ್ಮನೆಯಲ್ಲಿ ಅಂಗೀಕಾರ ಪಡೆಯದ ಹಿನ್ನೆಲೆಯಲ್ಲಿ ಸುಗ್ರೀವಾಜ್ಞೆ ಹೊರಡಿಸುವ ಮೂಲಕ ರಾಜ್ಯ ಸರ್ಕಾರ ಕಾನೂನು ಜಾರಿಗೆ ತಂದಿದೆ.

ಸುಗ್ರೀವಾಜ್ಞೆ ಜಾರಿಯಿಂದ ಇನ್ನುಮುಂದೆ ರಾಜ್ಯದಲ್ಲಿ ಎಲ್ಲ ವಯಸ್ಸಿನ ಆಕಳು, ಆಕಳ ಕರು, ಗೂಳಿ ಮತ್ತು ಎತ್ತು ಹಾಗೂ 13 ವರ್ಷದೊಳಗಿನ ಕೋಣ ಅಥವಾ ಎಮ್ಮೆಗಳ ಹತ್ಯೆ ನಿಷೇಧಿಸಲಾಗಿದೆ. ಹತ್ಯೆಯ ಉದ್ದೇಶದಿಂದ ಯಾವುದೇ ವ್ಯಕ್ತಿ ಯಾವುದೇ ಜಾನುವಾರನ್ನು ರಾಜ್ಯದೊಳಗೆ ಅಥವಾ ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕೆ ಸಾಗಾಣಿಕೆ ಮಾಡುವುದನ್ನು ಅಥವಾ ಸಾಗಾಣಿಕೆಗೆ ಕೊಡುವುದನ್ನು ನಿರ್ಬಂಧಿಸಲಾಗಿದೆ. ಯಾವುದೇ ವ್ಯಕ್ತಿ ಜಾನುವಾರು ಹತ್ಯೆಗಾಗಿ ಜಾನುವಾರು ಖರೀದಿಸುವುದನ್ನು, ಮಾರಾಟ ಮಾಡುವುದನ್ನು ಕೂಡ ನಿಷೇಧಿಸಲಾಗಿದೆ.

**ವಾಹನ, ಹಸು, ಜಾಗ ಜಪ್ತಿ:** ಅಪರಾಧ ನಡೆದ ಸಂದರ್ಭಗಳಲ್ಲಿ ಸಬ್ ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆ ಇಲ್ಲದ ಒಬ್ಬ ಪೊಲೀಸ್ ಅಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿಯಿಂದ ತನಿಖೆ ನಡೆಸಬೇಕು. ಈ ಅಧಿಕಾರಿಗೆ ಜಾನುವಾರನ್ನು ಹಾಗೂ ಅಪರಾಧ ಎಸಗಲು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಭೂಮಿ, ಆವರಣ ಅಥವಾ ವಾಹನಗಳನ್ನು ಜಪ್ತಿ ಮಾಡುವ ಅಧಿಕಾರವನ್ನು ನೀಡಲಾಗಿದೆ. ಅಪರಾಧಿಯಿಂದ ಮುಟ್ಟುಗೋಲು ಹಾಕಿಕೊಂಡ ಜಾನುವಾರು ಪೋಷಣೆ ಮಾಡಲು ಸರ್ಕಾರವೇ ಸಂಸ್ಥೆ ಸ್ಥಾಪಿಸಿ, ಅವುಗಳಿಗೆ ಅನುದಾನವನ್ನು ಸರ್ಕಾರವೇ ನೀಡಬೇಕು.



■ 2ನೇ ಬಾರಿ ಅಪರಾಧವೆಸಗಿದರೆ
₹1-10 ಲಕ್ಷ ದಂಡ, 7 ವರ್ಷ ಜೈಲು

■ ಆರೋಪ ಸಾಬೀತಾದರೆ ಜಾನುವಾರು, ವಾಹನ, ಭೂಮಿ, ಸಾಮಗ್ರಿ ಜಪ್ತಿ

# ಗೋಹತ್ಯೆ ನಿಷೇಧಕ್ಕೆ ಸುಗ್ರೀವಾಜ್ಞೆ ಜಾರಿ

6/1/21

↙ ಮೊದಲ ಪುಟದಿಂದ

**ಗೋಹತ್ಯೆ ಸಂಬಂಧಿ ಅಪರಾಧಕ್ಕೆ ಶಿಕ್ಷೆ:** ಜಾನುವಾರು ಹತ್ಯೆಗೆ ಹೊರತಾದ ಬೇರೆ ಅಪರಾಧ ಮಾಡಿದ್ದಲ್ಲಿ ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ವಾಸ ಅಥವಾ 50 ಸಾವಿರ ರು.ಗಳಿಗೆ ಕಡಿಮೆ ಇಲ್ಲದ ಆದರೆ ಐದು ಲಕ್ಷ ರು.ವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಈ ಎರಡರಿಂದಲೂ ದಂಡನೆ ನೀಡಲು ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.